**ಸಾಕ್ಷಿಗೆ ದಿನಾಂಕ 24.07.2025 ರಂದು ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ನಾನು ಬಿ.ಇ. ಹಾಗೂ ಎಂ.ಟೆಕ್ ಮತ್ತು ಎಲ್.ಎಲ್.ಬಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆ ವೆಂಕಟಸ್ವಾಮಿ, ತಾಯಿ ರತ್ನ. ನಾನು 2021 ರಲ್ಲಿ ಎಲ್.ಎಲ್.ಬಿ ವಿದ್ಯಾಭ್ಯಾಸ ಮುಗಿಸಿದ್ದು, ವಕೀಲರ ಕಛೇರಿಯಲ್ಲಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದೇನೆ. 2017-2018 ರಲ್ಲಿ ನಾನು ಕೃಷಿ ಉತ್ಪನ್ನಗಳ ಮಾರಾಟ ಹಾಗೂ Financial Services and Consultancy and Yoga Training Camp ಮಾಡುತ್ತಿದ್ದೆ. ನಾನು ನನ್ನ ತಂದೆಯ ಜೊತೆ ಪಾಲುದಾರಿಕೆಯಲ್ಲಿ ಆರ್ಥಿಕ ಸೇವೆಗಳನ್ನು ನೀಡುತ್ತಿದ್ದೆ, ಯಾವುದೇ ಪರವಾನಿಗೆ ಇರಲಿಲ್ಲ. ನನ್ನ ತಂದೆಯ ಹೆಸರಿನಲ್ಲಿ ಪರವಾನಿಗೆ ಇರುತ್ತದೆ. 2017 ರಲ್ಲಿ 27 ವರ್ಷ ವಯಸ್ಸಾಗಿತ್ತು. ಆರೋಪಿಯು ನನಗೆ 10-12 ವರ್ಷಗಳಿಂದ ಪರಿಚಯವೆಂದು ನನ್ನ ದೂರನಲ್ಲಿ ಹಾಗೂ ನೋಟೀಸ್‌ನಲ್ಲಿ ತಿಳಿಸಿರುತ್ತೇನೆ. ಆರೋಪಿಯ ಊರು ರಾಜಘಟ್ಟ, ಅವರು ಆಟೋ ಚಾಲಕರಾಗಿದ್ದು, ತರಕಾರಿ ವ್ಯಾಪಾರ ಮಾಡುತ್ತಿದ್ದು, ಆಗ ಪರಿಚಯವಾಗಿರುತ್ತಾರೆ. ನಿಪಿ-3, ದೂರು ಹಾಗೂ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ನಾನು ಆರೋಪಿಗೆ ಯಾವ ವರ್ಷ, ತಿಂಗಳು ಹಾಗೂ ದಿನಾಂಕದಂದು ಹಣವನ್ನು ನೀಡಿರುತ್ತೇನೆ ಎಂದು ತಿಳಿಸಿರುವುದಿಲ್ಲ ಮೊತ್ತ ಮಾತ್ರ ತಿಳಿಸಿರುತ್ತೇನೆ. ಸದರಿ ವಿಚಾರವನ್ನು ನಿಪಿ-3, ದೂರು ಹಾಗೂ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ತಿಳಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ವಕೀಲರು ಕೇಳಿದ ಮಾಹಿತಿಯನ್ನು ಮಾತ್ರ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ಹಣ ನೀಡಿರುವುದಿಲ್ಲ ಆ ಕಾರಣಕ್ಕೆ ಸದರಿ ವಿಷಯಗಳನ್ನು ಸದರಿ ದಾಖಲೆಗಳಲ್ಲೆ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿಯು ಆಟೋ ಚಾಲನೆ ಮಾಡುತ್ತಾರೆ ಹಾಗೂ ರಿಯಲ್ ಎಸ್ಟೇಟ್ ಹಾಗೂ ಇತರೆ ಕೆಲಸಗಳನ್ನು ಮಾಡುತ್ತಾರೆ. ಆರೋಪಿಯು ಆಟೋ ಖರೀದಿಸಲು ಮನೆಯಲ್ಲಿ ಅಡಚಣೆಯಿದ್ದು ಹಾಗೂ ಅವರ ಹೆಂಡತಿಯ ಆರೋಗ್ಯ ಸರಿಯಿಲ್ಲವೆಂದು ಹೇಳಿ ನನ್ನ ಬಳಿ ಹಣವನ್ನು ಪಡೆದುಕೊಂಡಿರುತ್ತಾರೆ. ಸದರಿ ವಿಚಾರವನ್ನು ನಿಪಿ-3, ದೂರು ಹಾಗೂ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ತಿಳಿಸಿರುತ್ತೀರಾ ಎಂದರೆ ಸಾಕ್ಷಿಯು ವ್ಯಾಪಾರಕ್ಕೆಂದು ತಿಳಿಸಿರುತ್ತೇನೆ, ಉಳಿದ ವಿಷಯಗಳನ್ನು ತಿಳಿಸಿರುವುದಿಲ್ಲ ಎಂದು ನುಡಿಯುತ್ತಾರೆ.

ಆರೋಪಿಯು ಯಾವಾಗ ಹಣವನ್ನು ಹಿಂದಿರುಗಿಸುತ್ತಾರೆ ಎಂದು ದೂರಿನಲ್ಲಿ ತಿಳಿಸಿರುತ್ತೀರಾ ಎಂದರೆ 2017 ಡಿಸೆಂಬರ್ ನಲ್ಲಿ ಕೇಳಿರುತ್ತಾರೆ ಹಾಗೂ 5-6 ತಿಂಗಳ ನಂತರ ಹಿಂದಿರುಗಿಸುತ್ತೇನೆ ಎಂದು ತಿಳಿಸಿರುತ್ತಾರೆ. ಆರೋಪಿಯ ವಿರುದ್ಧ ನಮ್ಮ ತಂದೆಯವರು ದಾವೆಯನ್ನು ಹೂಡಿರುವ ವಿಷಯ ನನಗೆ ನಂತರದಲ್ಲಿ ತಿಳಿದುಬಂದಿರುತ್ತದೆ. ದಾವಾ ಸಂಖ್ಯೆ ನನಗೆ ಗೊತ್ತಿಲ್ಲ. ಹಾಗೂ ನನ್ನ ತಂದೆಯ ನಡುವೆ ದಿಃ 03.02.2019 ರಲ್ಲಿ ಆದ ಕರಾರು ಪತ್ರದ ವಿಷಯ ನನಗೆ ಗೊತ್ತಿಲ್ಲ. ಸದರಿ ಕರಾರು ಪತ್ರವನ್ನು ನಾನು ನೋಡಿರುವುದಿಲ್ಲ. ಸಾಕ್ಷಿಗೆ ಕರಾರು ಪತ್ರವನ್ನು ತೋರಿಸಲಾಗಿ ಅದಕ್ಕೂ ನನಗೂ ಸಂಬಂಧವಿರುವುದಿಲ್ಲ ಎಂದು ನುಡಿಯುತ್ತಾರೆ.

ರೂ. 4,00,000/- ನಗದು ಹಣವನ್ನು ರೂ. 500/- ಮುಖ ಬೆಲೆಯ ನೋಟುಗಳ 8 ಬಂಡಲ್‌ಗಳಲ್ಲಿ ನೀಡಿರುತ್ತೇನೆ. ಸದರಿ ಹಣವನ್ನು ನನ್ನ ಮನೆಯಲ್ಲಿ ನೀಡಿರುತ್ತೇನೆ, ಆಗ ನಾನು ಒಬ್ಬನೇ ಇದ್ದೆ. ಆರೋಪಿಯು ಒಬ್ಬರೇ ಬಂದಿರುತ್ತಾರೆ. ಸದರಿ ಮೊತ್ತವನ್ನು ನಾನು ನೀಡುವ ಸಮಯದಲ್ಲಿ ನನ್ನ ಮನೆಯಲ್ಲಿ ನನ್ನ ಬಳಿ ಇದ್ದವು. ಅನೇಕ ವ್ಯವಹಾರಗಳಿಂದ ಬಂದ ಹಣವನ್ನು ನಾನು ಒಟ್ಟುಗೂಡಿಸಿ ನೀಡಿರುತ್ತೇನೆ. 5 ತಿಂಗಳ ನಂತರ ಹೋಗಿ ಆರೋಪಿಗೆ ಹಲವಾರು ಹಣ ಹಿಂದಿರುಗಿಸಲು ಕೇಳಿರುತ್ತೇನೆ. ಸಾಕ್ಷಿಗೆ ನಿಪಿ-3 ನ್ನು ತೋರಿಸಿ ಅದರಲ್ಲಿ ಎಲ್ಲಿ ಹೇಳಿರುತ್ತೀರಾ ಎಂದರೆ ಸಾಕ್ಷಿಯು ಸದರಿ ವಿಚಾರನ್ನು ನಿಪಿ-3 ರ 2 ನೇ ಕಂಡಿಕೆಯಲ್ಲಿ ತಿಳಿಸಿರುತ್ತೇನೆ.

ಸಾಕ್ಷಿಗೆ ದೂರನ್ನು ತೋರಿಸಲಾಗಿ ಸದರಿ ವಿಷಯವನ್ನು ಅದರಲ್ಲಿ ಎಲ್ಲಿ ತಿಳಿಸಿರುತ್ತೀರಾ ಎಂದರೆ ಸಾಕ್ಷಿಯು 3 ನೇ ಕಂಡಿಕೆಯಲ್ಲಿ ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ ನಮೂದು ಮಾಡಿದ ದಿನಾಂಕಕ್ಕಿಂತ ಒಂದು ವಾರದ ಮೊದಲು ನನಗೆ ನಿಪಿ-1 ನ್ನು ನೀಡಿರುತ್ತಾರೆ. ದಿಃ 11.06.2018 ರಂದು ನೀಡಿರುತ್ತಾರೆ. ಸದರಿ ವಿಚಾರವನ್ನು ನಿಪಿ-3, ದೂರು ಹಾಗೂ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ.

ನಮ್ಮ ತಂದೆಯವರು ನಡೆಸುತ್ತಿದ್ದ ಚೀಟಿ ವ್ಯವಹಾರದಲ್ಲಿ ಆರೋಪಿಯು ಸಹ ಒಂದು ಚೀಟಿಯನ್ನು ಹಾಕಿರುತ್ತಾರೆ ಎಂದರೆ ಸದರಿ ವಿಷಯದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಷಯದ ಬಗ್ಗೆ ನನ್ನ ತಂದೆಯ ಜೊತೆ ಮಾತನಾಡಿರುವುದಿಲ್ಲ. 2017 ರಲ್ಲಿ ನನ್ನ ವಾರ್ಷಿಕ ಒಟ್ಟು ಆದಾಯ ರೂ. 3,80,000/- ಇತ್ತು ಎಂದು ನುಡಿಯುತ್ತಾರೆ. ಹಾಗೂ ವ್ಯಾಪಾರದಿಂದ ಒಟ್ಟು ರೂ. 18,00,000/-ಗಳ ವಹಿವಾಟು ನಡೆದಿರುತ್ತದೆ. ಸದರಿ ಸಮಯದಂದು ನಾನು ವಿದ್ಯಾರ್ಥಿಯಾಗಿರಲಿಲ್ಲ. ನಾನು

ಮೇಲೆ ಹೇಳಿದ ವ್ಯವಹಾರಗಳನ್ನು ಮಾಡುತ್ತಿದ್ದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ನನ್ನ ಪರವಾಗಿ ಗುರುತುಪಡಿಸಿಕೊಂಡಿರುವುದಿಲ್ಲ.

ಆರೋಪಿಯ ವಾರ್ಷಿಕ ವರಮಾನ ಎಷ್ಟೆಂದು ಗೊತ್ತಿರುವುದಿಲ್ಲ. ಆರೋಪಿಯು ನನಗೆ ನನ್ನ ತಂದೆಯ ಜೊತೆ ಮಾಡಿಕೊಂಡ ವ್ಯವಹಾರದಿಂದ ಪರಿಚಯವಾಗಿರುತ್ತಾರೆ, ಖುದ್ದು ಪರಿಚಯವಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ನ್ನು ಆರೋಪಿಯು ನಮ್ಮ ತಂದೆಯ ಜೊತೆ ಮಾಡಿಕೊಂಡ ವ್ಯವಹಾರದ ಭದ್ರತೆಗೆಂದು ನೀಡಿದ ಚೆಕ್ಕಾಗಿರುತ್ತದೆ ಎಂದರೆ ಸರಿಯಲ್ಲ.

ನಿಪಿ-1 ರಲ್ಲಿ ಎಲ್ಲಾ ಮಾಹಿತಿಯನ್ನು ಆರೋಪಿಯೇ ಬರೆದಿರುತ್ತಾರೆ. ಆರೋಪಿಯ ವಿದ್ಯಾಭ್ಯಾಸದ ಬಗ್ಗೆ ಮಾಹಿತಿ ಇರುವುದಿಲ್ಲ. ನಿಪಿ-1 ರಲ್ಲಿರುವ ಎಲ್ಲಾ ಮಾಹಿತಿಯನ್ನು ನಾನೇ ಬರೆದುಕೊಂಡು ಆರೋಪಿಗೆ ಮೋಸ ಮಾಡುವ ಉದ್ದೇಶದಿಂದ ದುರುಪಯೋಗಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-3 ರಲ್ಲಿ ಆರೋಪಿಗೆ ಚೆಕ್ಕು ಅಮಾನ್ಯಗೊಂಡಿರುವ ವಿಷಯವನ್ನು ತಿಳಿಸಿರುತ್ತೇನೆ ಹಾಗೂ ಅದಕ್ಕೆ ಅವರು ಅಸಮರ್ಪಕ ಉತ್ತರವನ್ನು ನೀಡಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿ. ನನ್ನ ದೂರು ಹಾಗೂ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಚೆಕ್ಕು ಅಮಾನ್ಯಗೊಂಡ ವಿಷಯವನ್ನು ಆರೋಪಿಗೆ ತಿಳಿಸಿದ ನಂತರ ಆರೋಪಿಯು ಹಣದ ಪಾವತಿಯನ್ನು ಮುಂದೂಡಿರುತ್ತಾರೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ. ಪ್ರಕರಣದಲ್ಲಿರುವ ವ್ಯವಹಾರವನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯವಹಾರ ಆರೋಪಿಯ ಜೊತೆ ನಾನು ಮಾಡಿರುವುದಿಲ್ಲ. ಆರೋಪಿಯು ಪ್ರಕರಣದಲ್ಲಿ ಹಾಜರುಪಡಿಸಿರುವ ಚೆಕ್ಕನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಯನ್ನು ನನಗೆ ಕೊಟ್ಟಿರುವುದಿಲ್ಲ.

2017-2018 ರಲ್ಲಿ ಆರೋಪಿಗೆ ರೂ. 4,00,000/-ಗಳನ್ನು ನೀಡಲು ನಾನು ಶಕ್ತನಾಗಿರುವುದಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ನನ್ನ ತಂದೆಯ ಜೊತೆ ಫೈನಾನ್ಸ್ ನಡೆಸುತ್ತಿದ್ದೆ ಎಂದರೆ ಸರಿಯಲ್ಲ. ನಮ್ಮ ತಂದೆಯ ಜೊತೆ ನಾನು ನಡೆಸುತ್ತಿದ್ದ ಪಾಲುದಾರಿಕೆಯ ಪಾಲುದಾರರ ಕರಾರನ್ನು ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿಯು ಸದರಿ ವ್ಯವಹಾರಕ್ಕೂ ಈ ಪ್ರಕರಣಕ್ಕೂ ಸಂಬಂಧ ಇರುವುದಿಲ್ಲ ಆದರೆ ಹಾಜರುಪಡಿಸಲು ತೊಂದರೆ ಇಲ್ಲ ಎಂದು ನುಡಿಯುತ್ತಾರೆ. ಪಾಲುದಾರಿಕಾ ಸಂಸ್ಥೆಯಲ್ಲಿ ಒಟ್ಟು ಎಷ್ಟು ಆದಾಯ ಬರುತ್ತಿತ್ತು ಎಂದು ತಿಳಿಸಲು ಆಗುವುದಿಲ್ಲ. ಆರೋಪಿಯ ಚೆಕ್ಕನ್ನು ನಾನು ಮತ್ತು ನನ್ನ ತಂದೆ ದುರುಪಯೋಗಪಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಆರೋಪಿಯು ಸಹಿ

ಮಾಡಿರುತ್ತಾರೆ. ನಿಪಿ-4 ರಲ್ಲಿ ಆರೋಪಿಯ ಖೊಟ್ಟಿ ಸಹಿಯನ್ನು ನಾನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-3 ಆರೋಪಿಗೆ ಜಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**